Regd No B G 127 En

(62) 2

31—3—1965

ಸತ್ಯವಾದಿ

48 th Year

Satyavadi

DAILY

MYSORE

ಪ್ರಸಂಸ್ಥಾಪಕರು — ಆರಮನೆ ಸಿಂಸ್ಥೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಜಾಸಿಂಸ ಎಂ ಎಸ್ ಕೃಷ್ಣರಾವ್ 2 ಪೈಸೆ

ಬೆಳ್ಳಿ ನಾಣ್ಯ ನಿಂತೀತು

ವಾಷಿಂಗ್ಟನ್— ಅಮೇರಿಕಾದಲ್ಲಿ ಬೆಳ್ಳಿ ದಾಸ್ತಾನು ಕಡಮೆಯಾಗಿರುವುದರಿಂದ ಬೆಳ್ಳಿ ನಾಣ್ಯಗಳ ಚಲಾವಣೆ ಮುಂದುವರಿಸಲು ಸಾಧ್ಯವಾಗುವುದಿಲ್ಲವೆಂದು ಅಮೇರಿಕಾ ಸೆನೇಟಿಗೆ ಎಚ್ಚರಿಕೆ ಕೊಡಲಾಗಿದೆ.

★

ಅಕ್ಕಿ ರಾಗಿ ವಶ

ಚನ್ನಪಟ್ಟಣ ತಾಲ್ಲೂಕಿನ ಕೊಡಮಾರ ಹಳ್ಳಿಯಲ್ಲಿ ಒಬ್ಬ ವರ್ತಕನಿಂದ ಡಿಕ್ಲೇರು ಮಾಡದಿದ್ದ 50 ಕ್ವಿಂಟಾಲು ಅಕ್ಕಿ ಮತ್ತು 60 ಕ್ವಿಂಟಾಲು ರಾಗಿಯನ್ನು ಸಿ ಐ ಡಿ ಯವರು ವಶಪಡಿಸಿಕೊಂಡರು.

★

ಭಾಷಾ ಸಮಸ್ಯೆ

ಬೆಂಗಳೂರು— ರಾಜ್ಯಾಂಗ ತಿದ್ದುಪಡಿ ಅನಶ್ಯವಿಲ್ಲದಿದ್ದರೂ, ಶಾಸನಬದ್ಧವಾಗಿ ನಿಷ್ಕರ್ಷಿಂದರೆ ಭಂಜಸಿಯುಂತೆ ಅಧಿಕೃತ ಭಾಷಾ ಶಾಸನವನ್ನು ತಿದ್ದುಪಡಿ ಮಾಡುವುದು ಅನಶ್ಯಕವೆಂದು ವೈಶ್ಯಾಲಯಸಂರ್ಗದವು ಕೇಂದ್ರಕ್ಕೆ ತಿಳಿಸಿದೆ.

★

ಭೂಕಂಪದ ಅನಾಹುತ

ಸಾಂಟಿಗೊ— ವೆನಾಸ್ಟೆ ಜಿಲ್ಲೆಯಲ್ಲಾದ ಭೂಕಂಪದಲ್ಲಿ ಸುಮಾರು 600 ಮಂದಿ ಸತ್ತಿರುವರು ; ಅನೇಕರ ಪತ್ತೆ ಇಲ್ಲ ಸುಮಾರು 17 ಸಾವಿರ ಜನರು ವೈಲಿಯಲ್ಲಾ ಪಟ್ಟಣ ನಗರಗಳು ಹಾಳಾಗಿ ನಷ್ಟಗೊಂಡಿವೆ.

★

ಶಾಲೆಯ ಸಂಭಾಂಗ

ದೈವಜ್ಞ ಶಿಖಾಮಣಿ

ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ ಸಂಪತ್ಕೃಷ್ಣಜೋಯಿಸರಿಂದ

ಏಪ್ರಿಲ್ 1 ಗುರುವಾರ ಅಮಾ ಉಭಾ

ಇಟಲಿಗೆ ಅನಾನಸ್ ರಫ್ತು

ನವದೆಹಲಿ— ಇಟಲಿ ದೇಶದ ವ್ಯವಸಾಯ ಮತ್ತು ಅರಣ್ಯ ಶಾಖೆಯು ಭಾರತದಿಂದ 65 ಜೂನ್ 30 ರವರೆಗೆ ಅನಾನಸ್ಸು ಹಣ್ಣುಗಳನ್ನು ಆಮದು ಮಾಡಿಕೊಳ್ಳಲು ಅನುಮತಿ ನೀಡಿದೆ

❋

ಗಡಿ ವ್ಯಾಜ್ಯ

ಹೈದರಾಬಾದು— ಮೈಸೂರು ಆಂಧ್ರ, ಮಹಾರಾಷ್ಟ್ರಗಳ ಗಡಿ ವ್ಯಾಜ್ಯ ಕೊನೆಗೊಂಡಿಲ್ಲವೆಂದೂ, ಅವುಗಳನ್ನು ಬೇಗ ಪರಿಶೀಲಿಸುವುದಾಗಿಯೂ ಭಾರತ ಗೃಹಮಂತ್ರಿ ಶ್ರೀ ನಂದಾ ಮೊನ್ನೆ ತಿಳಿಸಿದರು.

❋

ಬಚ್ಚಿಟ್ಟ ಹಣ

ಕಲ್ಕತ್ತಾ— ಪಶ್ಚಿಮ ಬಂಗಾಳಾದಲ್ಲಿ 2 ಕೋಟಿ ರೂಗಳಷ್ಟು ಬಚ್ಚಿಟ್ಟ ಹಣದ ವಿಷಯ ಆದಾಯ ತೆರಿಗೆ ಇಲಾಖೆಗೆ ತಿಳಿಯುಪಡಿಸಲಾಗಿದೆ.

★

ಕೆದಪಸ್ಕಂಭ

ನವದೆಹಲಿ— ಧಹಸಾಂ ಸುತ್ತ ಕೆದಸ ಸ್ತಂಭ ನೆಲೆಸುವಂತೆ ಭಾರತ ಮತ್ತು ಸಾಕಿಸ್ತಾನ ಸಂಕಾರಂಗಳು ಕ್ರಮ ಕೈಗೊಂಡಿವೆ.

❋

ಹತರಾದರು

ಜಮ್ಮು— ಸುಚೇತಘರಿನ ಹತ್ತಿರ ಭಾರತ ಗಡಿಯೊಳಗೆ ನುಗ್ಗಿದ ಮೂರು ಮಂದಿ ಪಾಕಿಸ್ತಾನಿಗಳಲ್ಲಿ ಇಬ್ಬರು ಗಡಿ ಕಾವಲಿನವರಿಂದ ಹತರಾದರು

ಗುಂಡಿನ ಹೊಡೆತ ನಿಂತಿತು

ಪಿಲಾಂಗು— ಭಾರತ-ಪಾಕ್ ಕದನ ಸ್ತಂಭ ಒಪ್ಪಂದದಂತೆ ಅಸ್ಸಾಂ ಗಡಿಯಲ್ಲಿ ಪಾಕಿಸ್ತಾನದಿಂದ ಗುಂಡಿನ ಹೊಡೆತ ನಿಂತಿದೆ.

ಪತಿಭಟನಾ ಮೆರವಣಿಗೆ

ಬ್ರಸಲ್ಸ್— ಪರಮಾಣು ವಿರುದ್ಧ ಪುಟ್ಟ ವಿಯಟ್ನಾಮಿನಲ್ಲಿ ಅಮೇರಿಕಾ ನೀತಿಯನ್ನು ಪ್ರತಿಭಟಿಸಿ ಸಹಸ್ರಾರು ಮಂದಿ ಬೆಲ್ಜಿಯಮ್ಮಂ ರಾಜಧಾನಿಯಾದ ಬ್ರಸಲ್ಸ್ ಮೂಲಕ ವೆಂಬಣಿಗೆ ಸಡಿಸಿದರು.

ಸುಬಾಷರಿಗೆ ಸ್ವಾಗತ

ನವದೆಹಲಿ— ಶಾಲಿಪುರಾ ಆಗ್ರಮದಲ್ಲಿರುವ ಸನ್ಯಾಸಿ ನೇತಾಜಿ ಬೋಸ್‌ರವರೆಂದು ಪ್ರಧಾನಿಗಳು ಲೋಕಸಭೆಯಲ್ಲಿ ಮೊನ್ನೆ ತಿಳಿಸಿದರು — ನೇತಾಜಿ ಬೋಸರು ಭಾರತದಲ್ಲಿ ಕಂಡುಬಂದಕೆ ಅವರನ್ನು ಸಮ್ಮ ಅತಿ ಶ್ರೇಷ್ಠ ವೀರರಲ್ಲೊಬ್ಬರನ್ನಾಗಿ ಸ್ವಾಗತಿಸಲಾಗುವುದೆಂದು ಹೇಳಿದರು.

ಕಂಡಾಯ ಹಿಂದಿನಂತೆ ಇರಬೇಕು

ಶ್ರೀ ಎಂ ವೆಂಕಟಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಸಂಜೆ ಮೈಸೂರು ವೌಂಸಭೆಯ ಸಾಧಾರಣ ಸಭೆ ಸೇರಿತ್ತು

ಡಾ|| ಬಿ ಜಿ ದಾಸ್‌ರವರು ಮಾತನಾಡುತ್ತಾ, ಕಂದಾಯ ಹೆಚ್ಚಿಸಿರುವದು ನೂಂಕ್ಕೆ ನೂರಂಷ್ಟು ಅನೇಕ ಸಂದರ್ಭಗಳಲ್ಲಿ ಇಹೆ ಕಂದಾಯ ವಿಸಿಸುವ ವಿಚಾರಗಳಲ್ಲಿ ಅರ್ಜಿಗಳು ಬರುತ್ತಿವೆ ಅವುಗಳ ಪರಿಶೀಲನೆ ಆಗುವುದು ಹೂವಾಗ ಬಡವರ ಕಷ್ಟ ಹೇಳತೀರದು ಈಗಿರುವ ಕಂದಾಯವೇ ನಾಲ್ಕಾರು ವರ್ಷಗಳಿಂದ ವರಿಯಲಿ ಇಲ್ಲವೇ ರಂಷ್ಟದಲ್ಲಿರುವಂತೆ ಎಲ್ಲವು ಸರ್ಕಾರ ತೆಗೆದುಕೊಂಡು ಜನರಿಗೆ ಕೆಲಸ ಮತ್ತು ಅನುಕೂಲ ಕೊಡಲಿ ಎಂದರು.

❋ ಕೂಡಬಿಹಾರು ಗಡಿಯಲ್ಲಿ ಪಾಕಿಸ್ತಾನದ ಗುಂಡೇಟು ನಿಂತಿಲ್ಲ

ದುಂಡಕ

ಸೇಲಂ— ಗೌರೀಬಿದನೂರಿನ ಪ್ರಾಥಮಿಕ ಶಾಲೆಯ 44 ಸ್ಕೂಲು ಹುಡುಗರು ಒಂದು ಫ್ಯಾಕ್ಟರಿ ನೋಡಲು ಹೋಗುತ್ತಿದ್ದಾಗ ಎದುರಿಗೆ ಬಂದ ಬಸ್ಸೊಂದು ಅವರ ಮೇಲೆ ಹರಿದು 5ಹುಡುಗರು ಅಲ್ಲೇ ಸತ್ತು, 5 ಹುಡುಗರು ಗಾಯಗೊಂಡರು — ಬಸ್ಸ ಡ್ರೈವರು ದಸ್ತಗಿರಿ ಮಾಡಲ್ಪಟ್ಟನು.

ಸರ್ಕಾರಿ ಹೋಟಲುಗಳು!

ನವದೆಹಲಿ— ಭಾರತದ ರಾಜಧಾನಿಯಲ್ಲಿ ಸರ್ಕಾರಿ ಕ್ಷೇತ್ರದಲ್ಲಿರುವ ಅಶೋಕ ಮತ್ತು ಜನಪತ್ ಹೋಟಲುಗಳ ಜೊತೆಗೆ ಮತ್ತೆ ಐದು ಸರ್ಕಾರಿ ಹೋಟಲುಗಳನ್ನು ಸ್ಥಾಪಿಸಲಾಗುವುದು.

ಶ್ರೀ ಬಾಲರಾಜ್‌ರಿಗೆ ಪ್ರಶಸ್ತಿ

ಫನ್ ಪೋಪ್‌ರವರು ಮೈಸೂರು ಶ್ರೀ ಮನ್ಮಹಾರಾಜರವರ ಕಾರ್ಯಾಧಿಕ್ಷರಿ ಶ್ರೀ ಡಿ ಜಿ ಬಾಲರಾಜ್‌ರವರಿಗೆ ನೈಟ್ ಆಫ್ ಸೇಂಟ್ ಗ್ರೆಗರೀ ದಿ ಗ್ರೇಟ್ ಪ್ರಶಸ್ತಿಯನ್ನು ದಯಪಾಲಿಸಿರುವರು.

ಮೆದಿಯನ್ನು ಸುಟ್ಟರು

ವೆರಿಯರ್ (ಎಸಸಿಪಿ)— ನೀಗ್ರೋ ಬ್ಯಾಪ್ಟಿಸ್ಟ್ ಚರ್ಚನ್ನು ಯಾರೊ ನಾಲು ಮಂದಿ ಬೆಂಕಿ ಹಚ್ಚಿಸಿ ನಾಶ ಮಾಡಿದರು : ವರ್ಣ ದ್ವೇಷ !

ಕೂರತಲ್ಲ

ಬ

(ಮುಂದುವರಿದುದು)

ಇದಕ್ಕೆ ಕೇಳಿ ರಾಮಾನುಜರು ತುಂಬಾ ಆನಂದಭರಿತರಾಗಿ, ಆ ಮುಕ್ಕಳ ಜಾತಕರ್ಮ ಮತ್ತಿತರ ಸಮಸ್ಕಾರಗಳನ್ನು ನೆರವೇರಿಸಲು ಏರ್ಪಡಿಸಿದರು : ಅವರ ಹೊಡ್ಡಪ್ಪ ಎಂಬಾತ ಮುಕ್ಕಳ ಕಿವಿಯಲ್ಲಿ ' ದ್ವಯಂ ' ಎಂಬ ವೈಷ್ಣವ ಮಂತ್ರವನ್ನು ಹೇಳಿದನು ; ರಾಮಾನುಜರು ಹಿರಿಯ ಮಗುವಿಗೆ ಪರಾಶರನೆಂದೂ, ಕಿರಿಯವನಿಗೆ ವೇದವ್ಯಾಸನೆಂದೂ ಹೆಸರಿಟ್ಟರು. ತಮ್ಮ ಅದ್ಭುತ ಪ್ರತಿಭೆಯನ್ನು ಹುಡುಗನಲ್ಲಿರುವಾಗಲೇ ಪರಾಶರನು ಪ್ರದರ್ಶಿಸಿದನು ; ಅವನಿಗೆ ಐದು ವರ್ಷಗಳಾಗಿದ್ದಾಗ ಒಮ್ಮೆ ಮಳೆಯಲ್ಲಿ ಹುಡುಗರೊಡನೆ ಆಡುತ್ತಿದ್ದನು ; ಆಗ ಅಲ್ಲಿಗೆ ಒಬ್ಬ ತಮಿಳು ಬ್ರಾಹ್ಮಣ, ' ಸರ್ವಜ್ಞ ಭಟ್ಟರು ಬಂದಿದ್ದಾರೆ ; ಯಾವ ವಿದ್ವಾಂಸರೊಡನೆಯಾದರೂ ಚರ್ಚಿಸುತ್ತಾರೆ ' ಎಂದು ಸಾರುತ್ತ ಬಂದನು ; ಪರಾಶರನು ಸರ್ವಜ್ಞನಾಗಿ ಮಾತಾಡಬಲ್ಲನೆಂದು ಹುಡುಗ ಪರಾಶರನು ಎಸ್ಕೆಯಾಗಿಕೊಂಡನು ; ಆ ಸ್ವಪ್ರತಿಷ್ಠ ಸರ್ವಜ್ಞನಲ್ಲಿಗೆ ಕೈಯಲ್ಲಿ ಒಂದು ಹಿಡಿ ಮಂಳನ್ನು ಹಿಡಿದುಕೊಂಡು ಹೋಗಿ, ಅಲ್ಲಿ ಎಷ್ಟು ಕಾಳುಗಳಿವೆ, ಎಂದು ಕೇಳಿದನು : ಪಂಡಿತನು ದಿಙ್ಮೂಢನಾಗಿ ಸಮ್ಮುಕದಿಂದ ಹುಡುಗನನ್ನು ವೃಶಾಸಿಸಿ: ತನ್ನ ಅಜ್ಞಾನಾಂಧತೆಯನ್ನು ಕೃಜಿಸಿಂಪು ಬಾಗಿ ಹೇಳಿದನು.

ನಂತರ ಪರಾಶರನಿಗೆ ಉಪನಯನವಾಗಿ, ಪವಿತ್ರ ಗ್ರಂಥಗಳನ್ನು ವ್ಯಾಸರಾಗಮಾಡಿ, ಪರಾಶರ ಭಟ್ಟರ್ ಎಂದು ಖ್ಯಾತಿ ಪಡೆದು, ಅಲ್ಲಿಯ ಮಠ ಮತ್ತು ಶ್ರೀ ವೈಷ್ಣವ ಅಡಳಿತದಲ್ಲಿ ರಾಮಾನುಜಾಚಾರ್ಯರಂತೆ ಉತ್ಕೃಷ್ಟ ಅಧಿಕಾರಿಯಾದನು.

ಶ್ರೀ ರಾಮಾನುಜರ ' ಶೋಧಾಯುಸ ಪ್ರಿತಿ ' ಯನ್ನು ವ್ಯಾಸಂಗ ಮಾಡಲು ಅರಿಸಿದರು : ಈ ಅಪೂರ್ವ ಗ್ರಂಥವು ಕಾಶ್ಮೀರದ ಒಂದು ಲೈಬ್ರರಿಯಲ್ಲಿ ಮಾತ್ರ ದೊರೆಯುವುದಾಗಿತ್ತು ; ಅದ್ದರಿಂದ ಅವರು ಕೂಜೇಶನ್ನು ಕರೆದುಕೊಂಡು ಕಾಶ್ಮೀರಕ್ಕೆ ಹೋದರು ' ನ ಭೂತೋ ನ ಭವಿಷ್ಯತಿ ' ಎನ್ನುವಂತಿರುವ ಹಸ್ತಲಿಖಿತ ಗ್ರಂಥವನ್ನು ಲೈಬ್ರರಿಯಲ್ಲಿ ಓದಲು ಅನುಮತಿ ಕೊಡಲಾಯಿತಾದರೂ ತಮ್ಮ ಜೊತೆ ತೆಗೆದುಕೊಂಡು ಹೋಗಲಾಗಲಿಲ್ಲ : ಆದರೆ ವಿಶ್ವಾಸದಿಂದ ಆ ಹಸ್ತಲಿಖಿತ ಗ್ರಂಥವನ್ನು ಪಡೆದು ಕಾಶ್ಮೀರದಿಂದ ಎತ್ತಿನಬಂಡಿಯಲ್ಲಿ ಬರುತ್ತಿದ್ದರು ; ಆದರೆ ಲೈಬ್ರರಿಯ ಅಧಿಕೃತ ಜನರು ಹಿಂಬಾಲಿಸಿ ಬಂದು ಗ್ರಂಥವನ್ನು ಕಿತ್ತುಕೊಂಡು ಹೋದರು : ಇದು ರಾಮಾನುಜರಿಗೆ ತುಂಬಾ ನೈರಾಶ್ಯವನ್ನುಂಟುಮಾಡಿತು : ಆದರೆ ಕೂರೇಶನು ಅವರನ್ನು ಸಮಾಧಾನ ಪಡಿಸಿ, ತಾನು ಆತ್ಮ ಗ್ರಂಥವನ್ನು ಜೆನ್ನಾಗಿ ಓದಿರುವುದಾಗಿಯೂ ಅದನ್ನು ಬಾಯಿಪಾಠವಾಗಿ ಹೇಳಬಲ್ಲೆನೆಂದೂ ತಿಳಿಸಿದನು : ಕೂರೇಶನು ಯಾವ ಗ್ರಂಥವನ್ನಾಗಲೀ ಒಂದು ಅಥವಾ ಎರಡು ಸಾರಿ ಓದಿದರೆ ಪೂರ್ತಿ ಬಾಯಿಪಾಠ ಮಾಡಿ ಹೇಳಲು ಸಮರ್ಥನಾಗಿದ್ದನು ಅವರ ಅಶ್ಚರ್ಯಕರವಾದ ಜ್ಞಾಪಕಶಕ್ತಿಯ ಬಗ್ಗೆ ವ್ಯಕ್ತಪಡಿಸುತ್ತದೆ. | ಎಂಕ್ಕಿದ್ದು ನಾಳೇ ಸಂಚಿಕೆಯು

ಯುಗಾದಿ ಹಬ್ಬಕಾಗಿ

ಉ ರ

ಹೊಸಹೊಸ ವಿನ್ಯಾಸದ ಬಣ್ಣಗಳ, ಕಡಿಮೆ ಬೆಲೆಯ ಬಟ್ಟೆಗಳು ಬಂದಿವೆ

ಕೂಡಲೇ ಭೇಟಿ ಕೊಟ್ಟು ಬೇಕಾದ್ದನ್ನು ಆರಿಸಿಕೊಳ್ಳಿ

ಶ್ರೀ ಹರಕುರಾಂ ಹಾಲ್, ಸಯ್ಯಾಜಿರಾವ್ ರೋಡ್, ಮೈಸೂರು.

Help The Goraksha na

★

"ಗೋರಕ್ಷಣಾ" ಕ್ಕೆ ಬೆಂಬಲಿಗರಾಗಿರಿ

ವುಡ್‌ಲಾಂಡ್ ಶಿ ನ

26-3-65 ರಿಂದ

ಅಮೋಘ ಪ್ರಾರಂಭ

ಹೊಂಬಾಳಿಸಲ್ಲಿ ಲಕ್ಷಾಂತರ ಜನ ನೋಡಿ ಮುಕ್ತ ಕಂಠದಿಂದ ಹೊಗಳುತ್ತಿರುವ

ಅತ್ಯಮೋಘ ಹಿಂದಿ ಚಿತ್ರ ೧೫

ಬಹು ಬೇಟಿ ★ Bahu Beti

ನಾಶ್ರ- ಅಶೋಕಕುಮಾರ್, ಮಾಲಾಸಿನ್ಹ, ಜಾಯ್ ಮುಖರ್ಜಿ, ಮುಕಪ್ರಿ

ಪ್ರತಿದಿನ 3 ಪ್ರದರ್ಶನಗಳು

ಆಪೆರಾ— ಜಯಪ್ರದ 4 ನೇ ವಾರ

ನಾಗಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ ರಾಜಶ್ರೀ, ರಾಘವೇಂದ್ರರಾವ್

ಅನ್ಯೋಘ ಸಾಂತಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI

SUDHA

'A Superb Tonic



ಗೋರಕ್ಷಣಾ ಪ್ರಾಣಿಪಯೂ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ |

Edited, Printed & Published by the Proprietor
Dharma Prachara Nirata M S Krishna Rao
the Satyavadi Press Gomatesapuram Mysore 4